

## ರಾಜಕೀಯ ಹೂರಣದ 'ಪಕ್ಷಾಂತರ'

ಚೈತ್ರಿಕಾ ನಾಯ್ಕ, ಹರ್ಗಿ ಅವರು ಮಾ. 25ರ ಸಂಚಿಕೆಯಲ್ಲಿ ಬರೆದಿರುವ 'ಪಕ್ಷಾಂತರ' ಕಥೆ ಓದಿದೆ. ಪ್ರಸ್ತುತ ರಾಜಕೀಯ ಹಗರಣದ ಹೂರಣವನ್ನು ಆರಂಭದಲ್ಲಿ ಬಳಸಿಕೊಂಡ ಕಥೆ, ರೋಚಕ ಅಂತ್ಯ ಕಂಡದ್ದು ಕಥೆಗಾರರ ಜಾಣ್ಮೆಗೆ ಸಾಕ್ಷಿ. ಇದು ಹಿಚ್‌ಕಾಕ್ ಚಿತ್ರಗಳ ರೀತಿ ಮುಂದಿನ ಭಾಗದಲ್ಲಿ ಮುಂದುವರೆಸಲು ಕೂಡ ಅವಕಾಶ ಕಲ್ಪಿಸಿದಂತೆ ಅನಿಸಿತು.

—ಎಸ್.ಎ. ರವಿ, ಶಿವಮೊಗ್ಗ

## ಭಗವಂತನೆಲ್ಲಿದ್ದಾನೆ?

ದೇವಸ್ಥಾನದಲ್ಲಿರುವ ದೇವನ ಸ್ತುತಿಸುವ ಬದಲು, ಬಡ ಬಗ್ಗರಲ್ಲಿ, ನಿರ್ಗತಿಕರಲ್ಲಿ, ಅನಾಥರಲ್ಲಿ, ದೇವರನ್ನು ಕಾಣಬೇಕು ಎಂಬ ಸತ್ಯಾಂಶವನ್ನು ಬೆಟ್ಟದ ಮೇಲಿನ ನಕ್ಷತ್ರಗಳು (ಮಾ.18. ಮೂಲ: ಯಂಡಮೂರಿ ವೀರೇಂದ್ರನಾಥ್. ಅನುವಾದ: ಯತಿರಾಜ್ ವೀರಾಂಬುಧಿ) ಎಂಬ ಕಥೆಯು ಎತ್ತಿ ಹಿಡಿಯುತ್ತದೆ. ಕುಟುಂಬದಲ್ಲಿನ ಕಷ್ಟ,ನೋವುಗಳನ್ನು ಅರಿತು ಬಾಳಬೇಕು ಎಂಬ ಅರಿವನ್ನು ಸಹ ಮೂಡಿಸುವ ಮಹತ್ವದ ಕಾರ್ಯವನ್ನು ಈ ಕಥೆ ಮಾಡುತ್ತದೆ.

—ಸೌಲ್ ಅಭಿಷೇಕ್, ಬೆಂಗಳೂರು

ಈ ಕಥೆಯಲ್ಲಿ ಕಥೆಗಾರರು ಭಕ್ತಿ ಮತ್ತು ದೇವರೊಂದಿಗಿನ ಸ್ನೇಹದ ನಡುವಿನ ವ್ಯತ್ಯಾಸವನ್ನು ತುಂಬಾ ಸಮರಸವಾಗೇ ಚಿತ್ರೀಕರಿಸಿದ್ದಾರೆ. ಕಥೆಯಲ್ಲಿ ಬರೆದಿರುವ 'ದೇವರ ಮೇಲೆ ಭಕ್ತಿಯೂ ಚಪ್ಪಲಿ ಮೇಲೆ ಚಿತ್ತವೂ ಇದ್ದರೆ ಏನು ಪ್ರಯೋಜನ' ಎಂಬ ಸಾಲನ್ನು ಓದಿ ನನ್ನ ಹೃದಯದಲ್ಲಿ ನಕ್ಷತ್ರ ಹೊಳೆಯಿತು. ತೆಲುಗಿನಿಂದ ಕನ್ನಡಕ್ಕೆ ಮಾಡಿದ ಅನುವಾದವೂ ಕಥೆಗೆ ಸಂಪೂರ್ಣ ನ್ಯಾಯವನ್ನು ನೀಡಿದೆ.

—ಶ್ರೀದೇವಿ ಆರ್., ಬೆಂಗಳೂರು

## ಕಾಡು ಕುದುರೆಗಳು

ಟಿ. ಆರ್. ಅನಂತರಾಮು ಅವರ ಮುಖಪುಟ ಲೇಖನ 'ಕಾಡು ಕುದುರೆ' (ಮಾ. 25) ತುಂಬಾ ಸ್ವಾರಸ್ಯಕರವಾಗಿ ಮೂಡಿಬಂದಿದೆ. ಪ್ರಪಂಚದ ವಿವಿಧ ದೇಶಗಳ ಕಾಡುಗಳಲ್ಲಿ ಸ್ವತಂತ್ರವಾಗಿ ಓಡಾಡುವ ಕಾಡು ಕುದುರೆಗಳ ಏಳುಬೀಳುಗಳನ್ನು ಚೆನ್ನಾಗಿ ಚಿತ್ರಿಸಿದ್ದಾರೆ. ಕಾಡು ಪ್ರಾಣಿಗಳಾದ ಹುಲಿ, ಸಿಂಹ, ಆನೆಗಳನ್ನು ಪಳಗಿಸಿ ತನ್ನ ಸೌಕರ್ಯಕ್ಕೆ ಉಪಯೋಗಿಸುವ ಮನುಷ್ಯ, ಕಾಡು ಕುದುರೆಗಳನ್ನು ಪಳಗಿಸಿ ಅದರ ಅಶ್ವಶಕ್ತಿಯನ್ನು ದೇಶದ ಅಭಿವೃದ್ಧಿ ಕೆಲಸಗಳಿಗೆ ಉಪಯೋಗಿಸಲು ಸಾಧ್ಯವಿಲ್ಲವೇ?

—ಬಾಣಾವರ ನಾಗರಾಜ, ಬೆಂಗಳೂರು

ಕಾಡಿನಲ್ಲಿ ವಾಸಿಸುವ ಈ ತರಹದ ಒಂದು ಪ್ರಭೇದ ಎಂದು ಗೊತ್ತೇ ಇರಲಿಲ್ಲ. 'ಸುಧಾ' ಪತ್ರಿಕೆ ಲೇಖನಕ್ಕೆ ಧನ್ಯವಾದಗಳು.

—ರಮೇಶ್ ಜವಳಗಿ

## ಎಸ್‌ಎಸ್‌ಎಲ್ ಪ್ರವಾಸ ಮುಗಿಸಿ

ನಮ್ಮ ನೆಚ್ಚಿನ ಮೇಷ್ಟ್ರು, ಭಾವಗೀತೆಗಳ ಸರದಾರ ಬದುಕಿನ ಪ್ರವಾಸ ಮುಗಿಸಿದ ವಾರ್ತೆಯನ್ನು ಕನ್ನಡ ವಾಹಿನಿಗಳು ಸರಿಯಾಗಿ ಪ್ರಸ್ತುತಪಡಿಸದೆ ಇದ್ದದ್ದು ತುಂಬಾ ದುಃಖಕರ. ಮಾ. 25ರ ಸಂಚಿಕೆಯಲ್ಲಿ ಜಿ. ವಿ. ಅರುಣ ಅವರು ಬರೆದಿರುವ 'ಎಸ್. ಎಸ್.ಎಲ್. ಪ್ರವಾಸ ಮುಗಿಸಿ' ಲೇಖನದ ಮೂಲಕ 'ಸುಧಾ' ನಮ್ಮ ದುಃಖವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿರುವಳು. ಲೇಖನ ಮನ ಮುಟ್ಟುತ್ತದೆ. ಭಗವಂತನ ಬಳಿಯಲ್ಲಿ ನಮ್ಮ ಎಸ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಭಾವಗೀತೆಗಳ ಸುಮಧುರವಾದ ನಾದವನ್ನು ಹರಿಸಲಿ.



—ಕಮಲಾದೇವಿ ಆರ್. ಹಳ್ಳೂರ್, ಬೆಂಗಳೂರು

ಇದು ನಡೆದಿದ್ದು ಎಪ್ಪತ್ತರ ದಶಕದಲ್ಲಿ. ದೆಹಲಿಯ ಮೊಕ್ಕಾಂ ಮುಗಿಸಿ ಬೆಂಗಳೂರಿಗೆ ಹಿಂದಿರುಗುತ್ತಿದ್ದ ನಮ್ಮ ನಾಟಕ ತಂಡ(ನಟರಂಗ)ವನ್ನು ಹೊತ್ತ ಟ್ರೈನು, ಹುಣ್ಣಿಮೆಯ ರಾತ್ರಿ ಮಧ್ಯಪ್ರದೇಶದ ಚಂಬಲ್ ಕಣಿವೆಯಲ್ಲಿ ಹಾದು ಹೋಗುತ್ತಿತ್ತು. ತೆರೆದ ಕಿಟಕಿಯಿಂದ ಆ ಸೌಂದರ್ಯವನ್ನು ಆಸ್ವಾದಿಸುತ್ತಿದ್ದ ಭಟ್ಟರು ಎದುರಿಗೆ ಕುಳಿತಿದ್ದ ಸಿ. ಅಶ್ವತ್ಥರೆಡೆ ತಿರುಗಿ ಹಾಡೊಂದನ್ನು ಹೇಳುವಂತೆ ವಿನಂತಿಸಿದರು. ಥಟ್ಟನೆ ಅಶ್ವತ್ಥ್, 'ನೀವು ಕವನವನ್ನು ಬರೆದುಕೊಡಿ ಹಾಡುತ್ತೇನೆ' ಎಂದರು. ಆ ಸಂದರ್ಭದಲ್ಲಿ ಭಟ್ಟರು ಕ್ಷಣಾರ್ಧದಲ್ಲಿ ರಚಿಸಿದ ಕವನ 'ಎಂಥ ಮರುಳಯ್ಯ ಇದು, ಎಂಥಾ ಮರುಳು'. ಕವನವನ್ನು ಸೊಗಸಾಗಿ ಹಾಡಿದ್ದೇ ಅಲ್ಲದೆ ಅದನ್ನು ಅಶ್ವತ್ಥ್ ಅವರು ತಾವು ಸಂಗೀತ ಸಂಯೋಜಿಸಿದ ಒಂದು ಕನ್ನಡ ಚಿತ್ರದಲ್ಲಿಯೂ ಅಳವಡಿಸಿಕೊಂಡರು.

—ಶ್ರೀನಿವಾಸನ್ ಎಸ್.ಕೆ., ಬೆಂಗಳೂರು

## ಅಪೂರ್ವ ಚಿತ್ರಕಥನ

ಮಾ. 25ರ ಸಂಚಿಕೆಯಲ್ಲಿ ಡಿ.ಜಿ. ಮಲ್ಲಿಕಾರ್ಜುನ ಅವರು ಬರೆದಿರುವ 'ಸ್ವರ್ಗದ ಮಕ್ಕಳು' ಚಿತ್ರಲೇಖನ ಬಹಳ ಮುದನೀಡಿತು. ಭೂತಾನ್‌ನ ಪ್ರಕೃತಿ ಸೌಂದರ್ಯ ನೆನಪಲ್ಲಿ ಉಳಿಯುವಂತದ್ದು. ಅದೇ ರೀತಿ ಅಲ್ಲಿನ ಮಕ್ಕಳ ಮುಗ್ಧತೆಯ ಬಗ್ಗೆ ಹೇಳಿರುವುದು ಓದಿ ಖುಷಿಯಾಯಿತು.



—ಎಚ್. ಸಿದ್ಧಾರ್ಥ ಹೆಬ್ಬಾರ್, ಕಾರ್ಕಳ

## ಚಿತ್ರ ಪ್ರಪಂಚ

ಮಾ. 25ರ ಸಂಚಿಕೆಯಲ್ಲಿ ಎಂ.ಎಸ್. ಶೋಭಿತ್ ಅವರು ಬರೆದಿರುವ 'ಚಿತ್ರಾ ಚಿತ್ರ ಪ್ರಪಂಚ' ಓದಿದೆ. ಅಕ್ಕ ಚಿತ್ರಾ ಬರೆದ ಚಿತ್ರಗಳನ್ನು ನೋಡಿ ನನಗೂ ಹುಮ್ಮಸ್ಸು ಹೆಚ್ಚಾಗಿದೆ. ನನಗೆ ಕುದುರೆ ಚಿತ್ರ ತುಂಬಾ ಇಷ್ಟವಾಯ್ತು ಅಕ್ಕ.

ಶಾಲೆಗೆ ರಜಾ ಇದ್ದಾಗ ನಾನು ನಿಮ್ಮ ಹಾಗೆ ಚೆನ್ನಾಗಿ ಚಿತ್ರ ಬರೆದು ಅಭ್ಯಾಸ ಮಾಡಿಕೊಳ್ಳುತ್ತೇನೆ. ಮಕ್ಕಳು ವಿಜ್ಞಾನದಲ್ಲಿ ಚೆನ್ನಾಗಿ ಚಿತ್ರ ಬರೆಯುವುದರಿಂದ ಚಿತ್ರ ನೋಡಿದರೆ ಪಾಠ ಚೆನ್ನಾಗಿ ಅರ್ಥವಾಗುತ್ತದೆ. ಒಳ್ಳೆಯ ಅಂಕ ಪಡೆಯಲು ಸಹಾಯವಾಗುತ್ತದೆ. ಅವರು ಬರೆದ ಚಿತ್ರಗಳು ಮಕ್ಕಳಿಗೆ ಸ್ಫೂರ್ತಿಯಾಗುತ್ತದೆ.

—ಇಂಚರ ದತ್, ಬೆಂಗಳೂರು

## ಕೆಡುಕಿಗೆ ಮುನ್ನುಡಿ...

'ಪಾಲನೆ ಪೋಷಣೆ' ಪುಟದಲ್ಲಿ (ಮಾ. 25) ಸ್ವಯಂಪ್ರಭಾ ಬರೆದಿರುವ 'ಕೆಡುಕಿಗೆ ಮುನ್ನುಡಿ ತಪ್ಪುಗಳ ಸಮರ್ಥನೆ' ಲೇಖನ ಬಹಳ ಅರ್ಥಪೂರ್ಣವಾಗಿತ್ತು. ಹಿರಿ ಕಿರಿಯರಿಗೆ ಕಿವಿಮಾತಿನಂತಿದೆ.

—ಸರಸ್ವತಿ ಭೋಸಲೆ, ಧಾರವಾಡ

## ಪದಬಂಧ ನಿಲ್ಲಿಸದಿರಿ

ಮಾ. 25ರ ಸಂಚಿಕೆಯಲ್ಲಿ ಪದಬಂಧ ಇಲ್ಲದೆ ನನಗೆ ತುಂಬಾ ಬೇಸರವಾಗಿದೆ. ದಯವಿಟ್ಟು ಮುಂದಿನ ಸಂಚಿಕೆಯಲ್ಲಿ ತಪ್ಪದೇ ಪ್ರಕಟಿಸಿ.

—ಗಣಪತಿ ಪಿ.ಬಿ.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in